
# ‘Swami Vivekananda and Indian Freedom Movement - ‘ಸ್ವಾಮಿ ವಿವೇಕಾನಂದ ಮತ್ತು ಸ್ವಾತಂತ್ರ್ಯ ಚಳುವಳಿ’




**ಕೃತಿ:** Swami Vivekananda and Indian Freedom Movement- **ಸ್ವಾಮಿ ವಿವೇಕಾನಂದ ಮತ್ತು ಸ್ವಾತಂತ್ರ್ಯ ಚಳುವಳಿ**
**ಪ್ರಕಾಶನ : ರಾಮಕೃಷ್ಣ ಮಠ, ಬಸವನಗುಡಿ, ಬೆಂಗಳೂರು -19**
**ಪುಟ: 152 ಬೆಲೆ : 120**

ಬೆಂಗಳೂರು ರಾಮಕೃಷ್ಣ ಮಠದಲ್ಲಿ ೨೦೨೨ರ ಮೇ ೧೩ ಮತ್ತು ೧೪ ರಂದು ಜರಗಿದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪ್ರಸ್ತುತಪಡಿಸಿದ ಲೇಖನಗಳ ಸಂಕಲನವೇ ‘Swami Vivekananda and Indian Freedom Movement - **ಸ್ವಾಮಿ ವಿವೇಕಾನಂದ ಮತ್ತು ಸ್ವಾತಂತ್ರ್ಯ ಚಳುವಳಿ**’ ಎಂಬ ನೂತನ ಗ್ರಂಥ. ಇಂಗ್ಲಿಷ್ ಹಾಗೂ ಕನ್ನಡ ಭಾಷೆಗಳಲ್ಲಿ ಈ ಲೇಖನಗಳನ್ನು ಮಂಡಿಸಲಾದ್ದರಿಂದ ಈ ಗ್ರಂಥ ಎರಡೂ ಭಾಷೆಯಲ್ಲಿದೆ. ಸ್ವಾಮಿ ವಿವೇಕಾ ನಂದರನ್ನು ಕುರಿತು ವಿಶೇಷವಾಗಿ ಅಧ್ಯಯನ ಮಾಡಿರುವ ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ಆತ್ಮಶ್ರದ್ಧಾನಂದಜಿ, ಸ್ವಾಮಿ ಬೋಧಮಯಾನಂದಜಿ, ಸ್ವಾಮಿ ಮಹಾಮೇಧಾನಂದಜಿ – ಇವರ ಲೇಖನಗಳು ಇಂಗ್ಲಿಷ್‌ನಲ್ಲಿ, ಹಾಗೂ ಡಾ. ಹೆಚ್.ಎನ್.ಮುರಳೀಧರ, ಜಿ.ಎಸ್.ಜಯದೇವ, ಸುರೇಶ್ ಮೂನ, ಡಾ.ವಿ.ರಘು, ಸ್ವಾಮಿ ಸರ್ವಜಯಾನಂದಜಿ ಇವರ ಲೇಖನಗಳು ಕನ್ನಡದಲ್ಲೂ — ಒಟ್ಟು ಒಂಬತ್ತು ಲೇಖನಗಳು ಇಲ್ಲಿವೆ.

ಪ್ರಾಸ್ತಾವಿಕ ನುಡಿಗಳನ್ನು ಬರೆದಿರುವ ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿಯವರ ಮಾತುಗಳು ಒಟ್ಟು ವಿಚಾರಸಂಕಿರಣದ ಚಿಂತನೆಗಳ ಸಾರ ಸಂಗ್ರಹದಂತಿದೆ: ‘‘ಬ್ರಿಟಿಷರು ವಿದೇಶೀಯರಾಗಿಯೇ ಉಳಿದು, ವಿದೇಶೀಯರಾಗಿಯೇ ಆಳಿದರು – ರಾಜಕೀಯವಾಗಿ ಮಾತ್ರವಲ್ಲದೆ, ಸಾಂಸ್ಕೃತಿಕವಾಗಿಯೂ ಕೂಡ. ಈ ಹಿಂದೆ ಯಾವಾಗಲೂ ನಾವು ಸ್ವತಂತ್ರ ರಾಷ್ಟ್ರವಾಗಬೇಕು, ವಿದೇಶೀ ಆಳ್ವಿಕೆಯಿಂದ ಮುಕ್ತವಾಗಬೇಕು ಎಂಬ ಮಹತ್ವಾಕಾಂಕ್ಷೆ ರಾಷ್ಟ್ರಮಟ್ಟದಲ್ಲಿ ಜಾಗ್ರತವಾಗಿರಲಿಲ್ಲ. ಇಂತಹ ರಾಷ್ಟ್ರಮಟ್ಟದ ಜಾಗ್ರತಿಗೆ ಕಾರಣವಾದ ರಾಷ್ಟ್ರಪ್ರಜ್ಞೆಯನ್ನು ಕೆರಳಿಸಿದ ಮಹಾನ್ ವ್ಯಕ್ತಿ ಯಾರು ಎಂದು ನಾವು ನೋಡುತ್ತ ಹೋದರೆ ನಮ್ಮ ಕಣ್ಮುಂದೆ ಎದ್ದು ಕಾಣುವ ವ್ಯಕ್ತಿಯೇ ಸ್ವಾಮಿ ವಿವೇಕಾನಂದರು. ಇಡೀ ಭಾರತ ಒಂದು ಜನಾಂಗ, ಒಂದು ಧರ್ಮ, ಒಂದು ಸಂಸ್ಕೃತಿ ಎಂಬ ರಾಷ್ಟ್ರೀಯ ಏಕತೆಯನ್ನು ಎತ್ತಿ ತೋರಿಸಿದವರು ಸ್ವಾಮಿ ವಿವೇಕಾನಂದರು. ಇದರಿಂದಾಗಿ ಇಡೀ ರಾಷ್ಟ್ರವೇ – ಎಲ್ಲ ಜನಾಂಗದವರು, ಎಲ್ಲ ಧರ್ಮದವರು – ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವಂತಾಯಿತು.’’ *(ಪು.iv)*

‘ಸ್ವಾಮಿ ವಿವೇಕಾನಂದರು ಕಂಡ ಭಾರತದ ಭವಿಷ್ಯ’ *(ಮುಕ್ತಿದಾನಂದಜಿ)*, ‘ಭಾರತ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವ’ *(ಆತ್ಮಶ್ರದ್ಧಾನಂದಜಿ)*, ‘ಸ್ವಾಮಿ ವಿವೇಕಾನಂದರು ಮತ್ತು ನೇತಾಜಿ ಸುಭಾಷ್ ಚಂದ್ರ ಬೋಸ್’ *(ಬೋಧಮಯಾನಂದಜಿ)* ಹಾಗೂ ‘ಭಾರತದ ಮೇಲೆ ಸ್ವಾಮಿ ವಿವೇಕಾನಂದರಿಗಿದ್ದ ಪ್ರೀತಿ ಮತ್ತು ಅವರು ಕಂಡ ಭಾರತದ ಉಜ್ಜಲ ಚಿತ್ರ’ *(ಮಹಾಮೇಧಾನಂದಜಿ)* — ಇವು ಆಂಗ್ಲ ಲೇಖನಗಳ ಶೀರ್ಷಿಕೆಗಳು. ಕನ್ನಡದಲ್ಲಿ ‘ಸ್ವಾಮಿ ವಿವೇಕಾನಂದರ ಸ್ವಾತಂತ್ರ್ಯ ಮೀಮಾಂಸೆ’, *(ಡಾ.ಮುರಳೀಧರ)*, ‘ಸ್ವಾಮಿ ವಿವೇಕಾನಂದರು ಮತ್ತು ಮಹಾತ್ಮ ಗಾಂಧಿ’ *(ಜಯದೇವ)*, ‘ಸೌಮ್ಯವಾದಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಸ್ವಾಮಿ ವಿವೇಕಾನಂದರ ಪ್ರಭಾವ’ *(ಸುರೇಶ್ ಮೂನ)*, ‘ಭಾರತಕ್ಕಾಗಿ ವಿವೇಕಾನಂದರು ಸೃಷ್ಟಿಸಿದ ಸೋದರಿ ನಿವೇದಿತಾ’ *(ಡಾ. ರಘು)* ಹಾಗೂ ‘ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾಮಿ ವಿವೇಕಾನಂದರ ಮೊದಲ ಪ್ರಭಾವ – ಕ್ರಾಂತಿಕಾರೀ ಸಂಘಟನೆಗಳು’ *(ಸರ್ವಜಯಾನಂದಜಿ)* — ಇವು ಕನ್ನಡ ಲೇಖನಗಳ ಶೀರ್ಷಿಕೆಗಳು.

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿದ್ದ ನೇತಾಜಿ, ತಿಲಕ್, ಗಾಂಧೀಜಿ, ಕ್ರಾಂತಿಕಾರಿಗಳು, ಶ್ರೀ ಅರವಿಂದರು, ನಿವೇದಿತಾ ಮುಂತಾದವರ ಮೇಲೆ ಸ್ವಾಮಿ ವಿವೇಕಾನಂದರ ರಾಷ್ಟ್ರೀಯ ಪ್ರಜ್ಞೆ ಹಾಗೂ ಚಿಂತನೆಗಳು ಹೇಗೆ ಪ್ರಭಾವ ಬೀರಿದವು ಎಂಬುದನ್ನು ಇಲ್ಲಿನ ಲೇಖನಗಳು ವಿಶ್ಲೇಷಿಸುತ್ತವೆ. ಅದೇ ರೀತಿ, ಈ ನೇತಾರರು ಸ್ವಾಮೀಜಿಯವರ ವಿಚಾರಧಾರೆಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ಮುಂದೆ ಹೇಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹತ್ತರ ಪಾತ್ರ ವಹಿಸಿದರು ಎಂಬ ಸಮೀಕ್ಷೆಯೂ ಇಲ್ಲಿದೆ. ಮಹಾನ್ ಆಧ್ಯಾತ್ಮಿಕ ಪರಂಪರೆಯ ದೇಶವಾದ ಭಾರತದಲ್ಲಿ ರಾಜಕೀಯ-ಸಾಮಾಜಿಕ ಚಳುವಳಿ ಕೂಡ ಆಧ್ಯಾತ್ಮಿಕ ಮಹಾಪುರುಷನೊಬ್ಬ ಪ್ರೇರಣೆ, ಸ್ಫೂರ್ತಿಗಳಿಂದಲೇ ಮುನ್ನಡೆದಿರುವುದು ಇಲ್ಲಿ ಮೂಡಿಬರುವ ಅಚ್ಚರಿಯ ಸಂಗತಿಯಾಗಿದೆ. ರಾಷ್ಟ್ರೀಯ ಮಟ್ಟದಲ್ಲಿ ನಡೆದ ಚಳುವಳಿಯೊಂದಿಗೆ, ಪ್ರಾದೇಶಿಕ ನೆಲೆಯಲ್ಲಿ ನಡೆದ ಹೋರಾಟಗಳಲ್ಲೂ ಸ್ವಾಮಿ ವಿವೇಕಾನಂದರ ಪ್ರಭಾವವಿತ್ತು ಎಂಬುದು ಇಲ್ಲಿನ ಕೆಲವು ಲೇಖನಗಳಲ್ಲಿ ಸ್ಪಷ್ಟವಾಗಿ ಮೂಡಿಬಂದಿದೆ. ಹಲವು ಬಗೆಯ ಸಂಶೋಧನಾತ್ಮಕ, ವಿಶ್ಲೇಷಕ ಹಾಗೂ ಚಿಂತನಪರ ಲೇಖನಗಳಿಂದ ಕೂಡಿದ ಈ ಗ್ರಂಥವು ಸಂಗ್ರಹಯೋಗ್ಯವಾದುದು. ✽